ಕರ್ನಾಟಕ ವಿಧಾನಸಭೆ

ಶುಕ್ರವಾರ ೨೪ನೇ ಏಪ್ರಿಲ್ ೧೯೯೮ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦.೩೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಮಾಮನಿ) ಅವರು ಪೀಠವನ್ನು ಅಲಂಕರಿಸಿದ್ದರು

1) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಶಾಸಕರನ್ನು ಆಶ್ರಯ ಸಮಿತಿ ಅಧ್ಯಕ್ಷರನ್ನಾಗಿ ಮಾಡಿದ್ದರೂ ಈಗ ಮತ್ತೆ ಸಮಿತಿಗೆ ಮೂರು ಜನರನ್ನು ನಾಮಿನೇಟ್ ಮಾಡಲು ಸರ್ಕಾರ ಹೊರಟಿರುವುದು.

ಉಪಾಧ್ಯಕ್ಷರು: ಮೊದಲು ಪ್ರಶ್ನೋತ್ತರ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೆ, ಬಹಳ ಮುಖ್ಯವಾದ ವಿಚಾರ ಇದೆ. ಅದು ಶಾಸಕರಿಗೆ ಅಪಮಾನ ಮಾಡಿರತಕ್ಕದ್ದು. ನಮ್ಮನ್ನು ಆಶ್ರಯ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದರು. ಆದರೆ ಈಗ ಆ ಸಮಿತಿಗೆ ಅಧಿಕಾರಿಗಳು ಮತ್ತು ಅಧಿಕಾರೇತರರನ್ನು ನಾಮಕರಣ ಮಾಡಲು ಸರ್ಕಾರ ಹೊರಟಿದೆ. ಅವತ್ತು ಇಬ್ಬರು ಇದ್ದದನ್ನು ಈಗ ಮೂರು ಮಂದಿಯನ್ನು ನಾಮಿನೇಟ್ ಮಾಡಲು ಸರ್ಕಾರ ಹೊರಟಿದೆ. ಇದರಿಂದ ಶಾಸಕರಾದ ನಮಗೆ ಅಪಮಾನ ಮಾಡಿದಂತಾಗುತ್ತದೆ. ದಯಮಾಡಿ ಇದನ್ನು ರದ್ದು ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು: ಮೊದಲು ಪ್ರಶ್ನೋತ್ತರ ಮುಗಿಯಲಿ. ಅನಂತರ ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಉಪಾಧ್ಯಕ್ಷರೆ, ನಾಮಿನೇಷನ್ ಮಾಡಿ ಅವರ ಪಕ್ಷದವರಿಗೆ ಓಟಿಂಗ್ ರೈಟ್‌ನ್ನು ಕೊಟ್ಟಿದ್ದಾರೆ. ಅಧಿಕಾರಿಗಳನ್ನೂ ನಾಮಿನೇಷನ್ ಮಾಡಿ ಅವರಿಗೂ ಓಟಿಂಗ್ ರೈಟ್‌ನ್ನು ಕೊಟ್ಟಿದ್ದಾರೆ. ಇದು ಪ್ರಪಂಚದಲ್ಲಿ ಎಲ್ಲೂ ಇಲ್ಲ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ಹೂಡಿದರು)

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಈಗಾಗಲೇ ಇದರ ಬಗ್ಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಅದಕ್ಕೆ ನಾನು ಇವತ್ತು ಕಾನೂನು ಪ್ರಕಾರವಾಗಿ ಮಾತನಾಡುವುದಕ್ಕೆ ಎದ್ದುನಿಂತಿದ್ದೇನೆ. ನಾನು ಮೊದಲು ನಿಲುವಳಿ ಸೂಚನೆಯನ್ನು ಕೊಟ್ಟ ಮೇಲೆ, ತಾವು ನನಗೆ ಮೊದಲು ಕೇಳಬೇಕಾಗಿತ್ತು, ಇಲ್ಲದಿದ್ದರೆ ನಾವು ಕಾನೂನು ಪ್ರಕಾರ ಏತಕ್ಕೆ ಕಳುಹಿಸಬೇಕು?

(ಗೊಂದಲ)

ಉಪಾಧ್ಯಕ್ಷರು: ಸರ್ಕಾರದ ಪರವಾಗಿ ಸಚಿವರಾದ ಸಿಂಧ್ಯಾರವರು ಏನು ಹೇಳುತ್ತಾರೆ ಕೇಳಿ. ನಾನು ಹೇಳುವುದೇನೆಂದರೆ, ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ನಾವು ಇದೆ ವಿಷಯದ ಮೇಲೆ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬೇಕಾದರೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಪ್ರಶ್ನೋತ್ತರ ವೇಳೆಯನ್ನು ಬದಿಗಿಟ್ಟು ಇದನ್ನು ಚರ್ಚೆ ಮಾಡಿ ಎಂದು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ಇಲ್ಲಿ ನಾವು ಏಕೆ ಶಾಸಕರಾಗಿ ಕುಳಿತುಕೊಳ್ಳಬೇಕು, ಇನ್ನೆಲ್ಲಿದೆ ಪ್ರಶ್ನೋತ್ತರ ವೇಳೆ? ಈ ಸರ್ಕಾರ ಸರ್ವಾಧಿಕಾರಿ ಧೋರಣೆಯನ್ನು ತೆಗೆದುಕೊಂಡರೆ ಇನ್ನು ಚರ್ಚೆ ಎಲ್ಲಿದೆ ಹೇಳಿ? ನಾವು ಜನಪ್ರತಿನಿಧಿಗಳು ಜನರಿಂದ ಆಯ್ಕೆಯಾಗಿ ಬಂದಿದ್ದಕ್ಕೆ ಅರ್ಥವೇನಿದೆ?

(ಗೊಂದಲ)

ಉಪಾಧ್ಯಕ್ಷರು: ಸರ್ಕಾರದ ಪರವಾಗಿ ಏನು ಹೇಳುತ್ತಾರೆಂದು ಕೇಳೋಣ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ: I have discussed the issue I will withdraw it.

ಶ್ರೀ ಕೆ.ಎಸ್.ಈಶ್ವರಪ್ಪ: ಸಿಂಧ್ಯಾರವರು ಮಾತನಾಡುತ್ತೇನೆಂದು ಹೇಳುತ್ತಾರೆ, ಅದನ್ನು ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಲಿ

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಮಾತನಾಡುವುದಕ್ಕಿಂತ ಮುಂಚೆ ಇದೇನಿದು?

(ಗೊಂದಲ)

ಉಪಾಧ್ಯಕ್ಷರು: ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡಲಾಗಿದೆ, ವಿರೋಧಪಕ್ಷದ ನಾಯಕರೆಲ್ಲಾ ಚರ್ಚೆ ಮಾಡಲು ನನ್ನ ಕೊಠಡಿಗೆ ಬನ್ನಿ.

(ಸಭೆಯನ್ನು 10 ಗಂಟೆ 45 ನಿಮಿಷಕ್ಕೆ ಮುಂದೂಡಲಾಯಿತು)

(ಸಭೆಯು ಪುನಃ 11-20ಕ್ಕೆ ಸೇರಿತು, ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾತುಕತೆಯಲ್ಲಿ ಆ ಸುತ್ತೋಲೆಯನ್ನು ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ, ಅದನ್ನು ಇಲ್ಲಿ ಹೇಳಿಸಿ ಬಿಡಿ.

ಉಪಾಧ್ಯಕ್ಷರು: ಆಯಿತು, ಅದನ್ನು ಈಗ ಹೇಳುತ್ತಾರೆ. ಪುನಃ ಏಕೆ ಆ ವಿಚಾರವನ್ನು ಪ್ರಸ್ತಾಪ ಮಾಡುವುದು.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಈ ವಿಷಯವನ್ನು ಇಲ್ಲಿ ಹೇಳಬೇಕೋ ಬೇಡವೋ? ಅದಕ್ಕೆ ಅವರು ಉತ್ತರಿಸಬೇಕೋ ಬೇಡವೊ? ಇಲ್ಲಿ ಏನು ಪ್ರಸ್ತಾಪವಾಗಿದೆ? ಈ ಸದನದ ರೇಕಾರ್ಡ್‌ನಲ್ಲಿ ಏನು ಹೋಗಿದೆ? ಒಂದು ನಿಮಿಷ, ತಮಗೆ ಆನಂತರ ಅವಕಾಶವಿದೆ, ನೀವು ಆಮೇಲೆ ಮಾತನಾಡಿ, ನಾನು ನನ್ನ ಕಾಲ ಮೇಲೆ ನಿಂತಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಹೇಳುವುದೇನೆಂದರೆ, ಆಶ್ರಯ ಯೋಜನೆಯಲ್ಲಿ ತಂದಿರುವ ಹೊಸ ಸುತ್ತೋಲೆಯನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು. ನಾಮಕರಣ ಆದಂಥ ಸದಸ್ಯರಿಗೆ ಮತದಾನದಲ್ಲಿ ಅವಕಾಶ ಇರಕೂಡದು, ಈ ಸುತ್ತೋಲೆಯನ್ನು ಸಂಪೂರ್ಣವಾಗಿ ವಾಪಸ್ ತೆಗೆದುಕೊಳ್ಳಬೇಕು. ಇದು ಮೊದಲಿನಂತೆ ಆಗಬೇಕು.

(ಗೊಂದಲ)

ಶ್ರೀ ಕೆ.ಪ್ರತಾಪ್‌ಚಂದ್ರಶೆಟ್ಟಿ: ನಮ್ಮ ನಾಯಕರು ನಿಲುವಳಿ ಸೂಚನೆಯನ್ನು ತಂದಿದ್ದಾರೆ, ಅವರು ಮಾತನಾಡಲಿ. ಎಲ್ಲಾ ನೀವೆ ಮಾತನಾಡಿದರೆ ಹೇಗೆ? (ಗೊಂದಲ) ಯಾರು ನಿಲುವಳಿ ಸೂಚನೆಯನ್ನು ಕೊಟ್ಟಿರುತ್ತಾರೋ ಅವರು ಮಾತನಾಡುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಮ್ಮ ಕೊಠಡಿಯಲ್ಲಿ ಮಾತುಕತೆ ನಡೆದಿದ್ದಕ್ಕೆ ಸಂತೋಷ. ತಮ್ಮ ಕೊಠಡಿಯಲ್ಲಿ ಮಾನ್ಯ ರೇವಣ್ಣನವರು, ಸಿಂಧ್ಯರವರು, ಎಂ.ಪಿ.ಪ್ರಕಾಶ್‌ರವರು, ಭೈರೇಗೌಡರು ಹಾಗೂ ಇವರುಗಳ ಜೊತೆಯಲ್ಲಿ ಈ ಕಡೆ ವಿರೋಧ ಪಕ್ಷದ ನಾಯಕರೆಲ್ಲರೂ ಸೇರಿದ್ದರು. ಇಲ್ಲಿ ಪ್ರಮುಖವಾಗಿ ನಾವು ನಿಲುವಳಿ ಸೂಚನೆ ತಂದಿದ್ದೇನೆಂದರೆ, ವಸತಿ ಇಲಾಖೆಯಿಂದ ದಿನಾಂಕ: 3-4-98ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ಮೂರು ಅಂಶಗಳನ್ನು ಹಾಕಿದ್ದಾರೆ. ಮೂರು ಜನ ನಾಮಕರಣ ಮಾಡಿದಂಥ ಸದಸ್ಯರು, ಅಧಿಕಾರಿಗಳು, ಮತ್ತು ಶಾಸಕರು, ಇದಕ್ಕೆ ಶಾಸಕರೇ ಅಧ್ಯಕ್ಷರಾಗಿರುತ್ತಾರೆ. ಆಗ ಹಿಂದಿನ ಸುತ್ತೋಲೆಯಲ್ಲಿ ಏನು ಇತ್ತು ಎಂದರೆ, ಶಾಸಕರು ಮತ್ತು ಆ ಎಲ್ಲಾ ಸದಸ್ಯರು ಸೇರಿ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಾರೋ, ಅವರಿಗೆ ಆ ಮನೆಗಳನ್ನು ಕೊಡತಕ್ಕಂಥದ್ದು ಇತ್ತು. ಏತನ್ಮಧ್ಯೆ ಸರ್ಕಾರ ದಿನಾಂಕ: 3-4-98ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ಕೆಲವು ಕಂಡೀಷನ್‌ಗಳನ್ನು ಹಾಕಿದ್ದಾರೆ. ಅವು ಏನೆಂದರೆ, (1) ಪ್ರತಿ ತಿಂಗಳು ಕೆಡಿಪಿ ಸಭೆ ನಡೆಯುವ ದಿನಾಂಕದಲ್ಲಿ ಮಧ್ಯಾಹ್ನ ವಸತಿ ಸಮಿತಿ ಸಭೆಯನ್ನು ನಡೆಯುವಂತೆ ಸೂಚಿಸಲಾಗಿದೆ. (2) ಶಾಸಕರು ಮೂರು ತಿಂಗಳಿಗೊಮ್ಮೆ ನಡೆಸುವ ತ್ರೈಮಾಸಿಕ ಕೆಡಿಪಿ ಸಭೆ ನಡೆಸಬೇಕಾಗುತ್ತದೆ.. ಆದರೆ ಹೌಸಿಂಗ್ ಕಮಿಟಿಯನ್ನು ನಾವು ತಿಂಗಳಿಗೊಮ್ಮೆ ಕರೆಯಬಹುದು. ಕೆಲವು ಸಂದರ್ಭಗಳಲ್ಲಿ, ನಿಸರ್ಗ ವಿಕೋಪದಿಂದಾಗಿ ಮನೆಗಳು ಸುಟ್ಟು ಹೋದರೆ, ಅತಿ ವೃಷ್ಟಿಯಿಂದ ಮನೆಗಳು ಹಾಳಾಗಿ ಹೋದರೆ, ಇಂತಹ ಸಮಯದಲ್ಲಿ ಎಮರ್ಜೆನ್ಸಿ ಎಂದು ಹದಿನೈದು ದಿನಕ್ಕೂ ಸಭೆ ಕರೆಯಬಹುದು, ಅಥವಾ ತಕ್ಷಣವೇ ಸಭೆ ಕರೆಯಬಹುದು. ಈ ವ್ಯವಸ್ಥೆ ಮಾಡಬೇಕಾದರೆ ಶಾಸಕರು ಯಾವಾಗ ಹೇಳುತ್ತಾರೆ ಆಗ ಸಭೆ ಮಾಡಬೇಕಾಗುತ್ತದೆ. ಇಲ್ಲಿ ಮೆಜಾರಿಟಿ ಮೆಂಬರ್ಸ್ ಏನು ಇರುತ್ತಾರೆ ಅವರ ತೀರ್ಮಾನದ ಮೇಲೆ ಕೊಡಬೇಕು ಎಂದಾಗ, ಏನಾಗುತ್ತದೆಂದರೆ, ಸರ್ಕಾರದವರು ಮೂರು ಜನ ಸದಸ್ಯರನ್ನು ನಾಮಕಾರಣ ಮಾಡುತ್ತಾರೆ. ಸದಸ್ಯರು ಎಲ್ಲರೂ ಸಹಿತ ಸರ್ಕಾರದ ಹಿತದಲ್ಲಿ ಮಾಡುತ್ತಾರೆಂದು ನಾನು ಹೇಳುವುದಿಲ್ಲ. ನಮಗೂ ಕೂಡ ಅನುಭವ ಇದೆ. ಏಕೆಂದರೆ, ನಮ್ಮ ಸರ್ಕಾರ ಇದ್ದಾಗಲೂ ಕೂಡ ನಾವು ಹೇಳಿದ ಎಲ್ಲಾ ಮೆಂಬರ್‌ಗಳು ಕೂಡ ಒಳ್ಳೆಯ ರೀತಿ ಮಾಡುತ್ತಾರೆ ಎನ್ನತಕ್ಕಂಥದ್ದು ಇಲ್ಲ. ಆಗ ಏನಾಗುತ್ತದೆಂದರೆ, ಮೂರು ನಾಲ್ಕು ಜನ ಒಂದು ಸಿಂಡಿಕೇಟ್ ಮಾಡಿಕೊಂಡು, ತಾವೇ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥದ್ದು ಹಾಗೂ ತಮಗೆ ಬೇಕಾದ ಜನರಿಗೆ ಮನೆಗಳನ್ನು ಕೊಡತಕ್ಕಂಥದ್ದು ಬರುತ್ತದೆ. ಆಗ

ಏನಾಗುತ್ತದೆಂದರೆ, ನಾಳೆ ಅದರಲ್ಲಿ ಕರಪ್‌ಷನ್ ನಡೆಯಬಹುದು ಅಥವಾ ಒಬ್ಬೊಬ್ಬರ ಮನೆಯಿಂದ ಒಂದೊಂದು ಸಾವಿರ ರೂಪಾಯಿಗಳನ್ನು ಕಲೆಕ್ಟ್ ಮಾಡಿ, ಡಿಸ್ಟ್ರಿಬ್ಯೂಟ್ ಮಾಡಿಕೊಂಡು, ಈ ಮೂರು ಜನ ಸದಸ್ಯರು ಒಂದೇ ಕಡೆ ಸೇರಿಕೊಂಡು, ಎಂ.ಎಲ್.ಎ. ಹೇಳುವುದನ್ನು ಕೇಳುವುದಿಲ್ಲ ಮತ್ತು ನಿಮ್ಮ ಸುತ್ತೋಲೆಯ ನಿಯಮಾವಳಿಯನ್ನು ಸಹ ಉಪಯೋಗ ಮಾಡುವುದಿಲ್ಲ. ಅಥವಾ ಹೌಸಿಂಗ್ ಗೈಡ್‌ಲೈನ್ಸ್‌ನ್ನು ನೋಡದೆ ತಮಗೆ ಬೇಕಾಗಿದ್ದವರಿಗೆ ಕೊಡತಕ್ಕಂಥ ಸಾಧ್ಯತೆ ಇರುತ್ತದೆ. ಅದಕ್ಕಾಗಿ ಇದು ದುರುಪಯೋಗ ಆಗಬಾರದೆಂದು, ನಾವು ಕಳಕಳಿಯಿಂದ ಮನವಿ ಮಾಡಿಕೊಂಡಿದ್ದೇವೆ ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು, ವಸತಿ ಸಚಿವರಿಬ್ಬರು ಒಪ್ಪಿಕೊಂಡಿದ್ದಾರೆ. ಈ ಒಂದು ಜಿ.ಓ.ನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು ಮತ್ತು ಮೊದಲಿನ ಜಿ.ಒ.ನಂ. 34: 1998 ಮತ್ತು ಸುತ್ತೋಲೆ ನಂ.ವ.ಇ 9, ಇದನ್ನು ವಿತ್‌ಡ್ರಾ ಮಾಡಿಕೊಂಡರೆ ಯಥಾಪ್ರಕಾರ ಕಮಿಟಿಗಳು ನಡೆಯುತ್ತವೆ ಇದೇ ಸಂದರ್ಭದಲ್ಲಿ ಒಂದು ಮಾತನ್ನು ತಮ್ಮ ಗಮನಕ್ಕೆ ತಂದು ಅವರಿಗೂ ಕೂಡ ಭರವಸೆಯನ್ನು ಕೊಡುತ್ತೇನೆ. ಅದೇನೆಂದರೆ, ಎಲ್ಲಾ ಸದನದ ಸದಸ್ಯರು, ಅಂದರೆ, ಆಡಳಿತ ಪಕ್ಷದವರಿರಬಹುದು ಅಥವಾ ವಿರೋಧ ಪಕ್ಷದವರಿರಬಹುದು, ಎಲ್ಲರೂ ಕೂಡ ಇದರಲ್ಲಿ ಆಸಕ್ತಿ ವಹಿಸಿ ಸಮಿತಿಯ ಸಭೆಗಳನ್ನು ಹೆಚ್ಚಿಗೆ ಮಾಡಿ, ವಸತಿ ಆಕ್ಟಿವಿಟೀಸ್‌ನಲ್ಲಿ, ಅದರಲ್ಲಿ ಆಶ್ರಯ ಯೋಜನೆ ಇರಬಹುದು ಅಥವಾ ಅಂಬೇಡ್ಕರ್ ಯೋಜನೆ ಇರಬಹುದು, ಇದರಲ್ಲಿ ಸಕ್ರಿಯ ಪಾತ್ರ ವಹಿಸಿ, ಹೆಚ್ಚು ಸಭೆಗಳನ್ನು ನಡೆಸಿ, ನಿಮ್ಮ ಗುರಿ ಏನು ಇದೆ, ಅದನ್ನು ಅಚೀವ್ ಮಾಡತಕ್ಕಂಥದ್ದನ್ನು ನಾವೆಲ್ಲರೂ ಕೂಡ ಮಾಡುತ್ತೇವೆ ಮತ್ತು ನಿಮ್ಮ ನಿರೀಕ್ಷೆ ಪ್ರಕಾರ ತಮ್ಮ ತಮ್ಮ ಮತ ಕ್ಷೇತ್ರದಲ್ಲಿ ಎಲ್ಲಾ ಶಾಸಕರು ಕೂಡ ಕೆಲಸ ಮಾಡುತ್ತೇವೆ ಎಂಬ ನಂಬಿಕೆ ನನಗೆ ಇದೆ. ಈ ಒಂದು ಪ್ರಜಾಪ್ರಭುತ್ವದಲ್ಲಿ, ಶಾಸಕರಿಗೆ ಏನು ಅಧಿಕಾರ ಕೊಟ್ಟಿದ್ದೀರಿ ಅದು ನಡೆಯಲಿ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇದರ ಬಗ್ಗೆ ತಾವು ಪ್ರಕಟಣೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ಆಶ್ರಯ ಸಮಿತಿಗೆ, ಅನೇಕ ಕಡೆ ವಿರೋಧ ಪಕ್ಷದ ಶಾಸಕರು ಒಬ್ಬರು ಇರುತ್ತಾರೆ, ಆಡಳಿತ ಪಕ್ಷದ ಜನತಾದಳದವರು ಮೂರು ಜನರನ್ನು ನಾಮಕರಣ ಮಾಡಿರುತ್ತಾರೆ. ಇಲ್ಲಿ ಅಧಿಕಾರಿಗಳಿಗೆ ಮತದಾನದ ಹಕ್ಕನ್ನು ಕೊಡತಕ್ಕಂಥ ಸ್ಥಿತಿ ಬಂದರೆ, ಈ ಸಭೆಯಲ್ಲಿ ಅರ್ಧ ಫಲಾನುಭವಿಗಳ ಆಯ್ಕೆ ಹಾಗೂ ಹಂಚಿಕೆ ಬಗ್ಗೆ ಭಿನ್ನಾಭಿಪ್ರಾಯ ಉಂಟಾದಲ್ಲಿ, ಆಗ ಹಾಜರಾಗಿರತಕ್ಕಂಥ ಸದಸ್ಯರು ಬಹುಮತದಲ್ಲಿ ನಿರ್ಣಯವನ್ನು ತೆಗೆದುಕೊಳ್ಳಬೇಕು. ನಾನು ಏಕೆ ಈ ವಿಷಯವನ್ನು ಹೇಳುತ್ತೇನೆಂದರೆ, ಅಲ್ಲಿ ನಾವು ಒಬ್ಬರೆ ಇರುತ್ತೇವೆ. ಮಾನ್ಯ ಉಪಾಧ್ಯಕ್ಷರೆ ನನಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ಈ ಸುತ್ತೋಲೆಯಲ್ಲಿ ಸ್ಪಷ್ಟವಾಗಿ, ಇಂಥ ದಿವಸವೇ ಸಭೆಯನ್ನು ಕರೆಯಬೇಕೆಂದು ಮಾಡಿದ್ದಾರೆ. ಇಲ್ಲಿ ನಮಗೆ ಜವಾಬ್ದಾರಿ ಇರುತ್ತದೆ, ಆದರೆ ನಾವು

ತೀರ್ಮಾನ ಮಾಡುವ ಹಕ್ಕು ಉಳಿದಿರುವುದಿಲ್ಲ. ಫಲಾನುಭವಿಗಳ ಆಯ್ಕೆಯನ್ನು, ಗ್ರಾಮಾಂತರ ಪ್ರದೇಶದಲ್ಲಿ ತಾಲ್ಲೂಕು ಪಂಚಾಯತಿ ಮತ್ತು ನಗರ ಪ್ರದೇಶಗಳಲ್ಲಿ, ನಗರಸಭೆಯವರು ತೀರ್ಮಾನ ಮಾಡಿ ಕಳುಹಿಸುತ್ತಾರೆ. ಅನೇಕ ಕಡೆ, ಆರಾಧನ ಸಮಿತಿ ಮತ್ತು ಬಗರ್ ಹುಕುಂ ಸಮಿತಿಯಲ್ಲಿ ಇವರ ಕಡೆ ಸದಸ್ಯರು ಹಾಕಿದ್ದರು ಸಹ, ಇವರ ಜೊತೆ ಕುಳಿತುಕೊಂಡು ಚರ್ಚೆ ಮಾಡಿ ತೀರ್ಮಾನ ಮಾಡಿಕೊಂಡು ಹೋಗಿದ್ದೇವೆ. ಈಗ ಅವರಿಗೆ ಅಧಿಕಾರದ ಮತದಾನದ ಹಕ್ಕನ್ನು ಕೊಟ್ಟರೆ, ಅಲ್ಲಿ ಶಾಸಕರಿಗೆ ಯಾವುದೇ ರೀತಿಯ ಗೌರವ ಇರುವುದಿಲ್ಲ. ಅದಕ್ಕೋಸ್ಕರ ಸರ್ಕಾರ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಇದು ಒಂದು ರೀತಿಯಲ್ಲಿ ಶಾಸಕರಿಗೆ ಅವಮಾನ ಮಾಡಿದಂತಹ ಪ್ರಯತ್ನ ಇದಾಗಿದೆ. ಆದ್ದರಿಂದ ದಯವಿಟ್ಟು ಈ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಮ್ಮ ಶಾಸಕರ ಸಭೆಯಲ್ಲಿ ಕೂಡ ಚರ್ಚೆಯಾಗಿ ತೀರ್ಮಾನವಾಗಿದೆ, ಅದಕ್ಕೆ ತಾವು ಕೂಡ ಅವಕಾಶ ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್: ಆಶ್ರಯ ಸಮಿತಿಯಲ್ಲಿ, ಶಾಸಕರು ಅಧ್ಯಕ್ಷರಾಗಿರಬೇಕೆಂದು ನನ್ನ ಸತತವಾದ ಹೋರಾಟ ಇದೆ, ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಎರಡು-ಮೂರು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಇವತ್ತು ನಮ್ಮನ್ನೆಲ್ಲ ಕರೆದು, ಒಟ್ಟಾರೆ ತೀರ್ಮಾನ ಬಂದಿದ್ದಕ್ಕೆ ನಾನು ನಿಜವಾಗಿಯೂ ಪ್ರಾಮಾಣಿಕವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ಚರ್ಚೆಯಾಗಿದೆ ಎಂದು ತಿಳಿದುಕೊಂಡಿದ್ದರೂ, ತಮ್ಮ ಗಮನಕ್ಕೆ ಒಂದು ಮಾತನ್ನು ತರುತ್ತೇನೆ. ಕೆ.ಡಿ.ಪಿ. ಸಭೆ ಬೆಳಿಗ್ಗೆಯೇ ಸೇರಬೇಕೆಂದು ಹೇಳತಕ್ಕಂಥ ವಿಚಾರ ಮತ್ತು ನಾಮಕರಣ ಸದಸ್ಯರು, ಬಹುಮತದ ಮೇಲೆ ತೀರ್ಮಾನ ಆಗಬೇಕು ಎನ್ನತಕ್ಕಂಥ ವಿಚಾರ, ಇವೆಲ್ಲಾ ಬಂದಾಗ ಏನು ಆಗುತ್ತದೆಂದರೆ, ಈ ಸಮಿತಿಯನ್ನು ಸಂಪೂರ್ಣವಾಗಿ ಒಂದು ರೀತಿಯಲ್ಲಿ ಪ್ರಜಾತಂತ್ರ ವ್ಯವಸ್ಥೆಗೆ ವಿರುದ್ಧವಾದ ದಿಕ್ಕಿಗೆ ನಾವು ತೆಗೆದುಕೊಂಡು ಹೋಗತಕ್ಕಂಥ ಪ್ರಶ್ನೆ ಬರುತ್ತದೆ. ಆ ದೃಷ್ಟಿಯಿಂದ ಮೂಲಭೂತವಾಗಿ ಮೊದಲು ಏನು ಇತ್ತು, ಆ ಒಂದು ತೀರ್ಮಾನದ ಸಮಿತಿ ವ್ಯವಸ್ಥೆ ಇರಬೇಕು. ಈಗಿರತಕ್ಕಂಥ ಸುತ್ತೋಲೆಯನ್ನು ಸರ್ಕಾರ ಚಾಚುತಪ್ಪದೆ, ಒಂದು ಅಕ್ಷರ ಬಿಡದೆ ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಎರಡು ಮುಖ್ಯವಾದ ವಿಷಯಗಳು ಇವೆ. ಮೊದಲನೆಯದು, ದಿನಾಂಕ 6- 10- 1997ನೇ ತಾರೀಖು ಜಿ.ಓ. ಅನ್ನು ಪಾಸ್ ಮಾಡಲಾಗಿದೆ. ಈ ಜಿ.ಓನಲ್ಲಿ ಏನಿದೆ ಎಂದರೆ, ವಸತಿ ಸಮಿತಿಗೆ ಎಂ.ಎಲ್.ಎ. ಅಧ್ಯಕ್ಷರಾಗಿರಬೇಕು ಮತ್ತು ತಾಲ್ಲೂಕು ಪಂಚಾಯತಿಯ ಅಧ್ಯಕ್ಷರು, ಇದಕ್ಕೆ ಉಪಾಧ್ಯಕ್ಷರಾಗಿರಬೇಕು ಮತ್ತು ಮೂರು ಜನ ನಾಮಿನೇಟೆಡ್ ಮೆಂಬರ್ಸ್ ಇರಬೇಕು, ಇವರ ಜೊತೆ ಇಬ್ಬರು ಅಧಿಕಾರಿಗಳು, ಅಂದರೆ, ತಹಸೀಲ್ದಾರರು ಮತ್ತು ಎಕ್ಸಿಕ್ಯುಟೀವ್ ಆಫೀಸರ್ ಸಹ ಮೆಂಬರ್ಸ್ ಆಗಿರಬೇಕು. ಎಕ್ಸಿಕ್ಯೂಟೀವ್ ಆಫೀಸರ್

ವರ್ಕಿಂಗ್ ಸೆಕ್ರೆಟರಿಯಾಗಿ ಇರಬೇಕೆಂದು ಇದೆ. ಜಿ.ಓನಲ್ಲಿ ನಾಮಿನೇಟೆಡ್ ಮೆಂಬರ್ಸ್‌ಗೆ ಮತದಾನದ ಹಕ್ಕು ಇಲ್ಲವೆಂದು ಸ್ಪಷ್ಟಪಡಿಸಿಲ್ಲ. ಅಧಿಕಾರಸ್ಥರು, ಪಂಚಾಯತ್ ರಾಜ್ ಸಿದ್ಧಾಂತದ ಪ್ರಕಾರ ಅವರಿಗೆ ಸರಿಸಮಾನವಾಗಿ ಈ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳುವ ಅವಕಾಶ ಇಲ್ಲ. ನಾನ್ ಅಫಿಶಿಯಲ್ ಎಲೆಕ್ಟೆಡ್ ಮೆಂಬರ್ಸ್, ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಅದನ್ನು ಅನುಷ್ಠಾನ ಮಾಡುವ ಜವಬ್ದಾರಿ ಮಾತ್ರ ಅವರಿಗೆ ಇರುತ್ತದೆ. ಈ ತತ್ವ ಏನಿದೆ, ಅದನ್ನು ಸಂಪೂರ್ಣವಾಗಿ ಕೈಬಿಡಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ಅಪಘಾತ ಮಾಡಿದಂತೆ ಆಗುತ್ತದೆ. ಏಕೆಂದರೆ, ಯಾವ ಊರಿನಲ್ಲಿ ಎಷ್ಟು ಮನೆಗಳನ್ನು ಕಟ್ಟಬೇಕೆಂದು ತೀರ್ಮಾನ ಮಾಡುವವರು ಅಧಿಕಾರಿಗಳಾಗಿರುತ್ತಾರೆ. ಈಗ ಏಕಾಏಕಿ, ದಿನಾಂಕ 3-4-98ರಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಆದರಲ್ಲಿ, ಏನು ಹೇಳಿದ್ದಾರೆಂದರೆ, ಇಂಥ ದಿನವೇ ಸಭೆ ನಡೆಯಬೇಕು, ಮತ್ತು ಇಲ್ಲಿ ಎಲ್ಲಾ ತೀರ್ಮಾನಗಳು ಬಹುಮತದಿಂದ ಆಗಬೇಕು. ಅಂದರೆ ಇಲ್ಲಿ ನಾಮಿನೇಟೆಡ್ ಮೆಂಬರ್ಸ್‌ಗೆ ಮತದಾನದ ಹಕ್ಕು ಇದೆ ಎಂದು ಆಯಿತು. ಇದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ, ನಮ್ಮ ಸರ್ಕಾರ ಮತ್ತು ನಿಮ್ಮ ಸರ್ಕಾರ ಮಾಡಿರುವ ಪಂಚಾಯತ್ ರಾಜ್ ವ್ಯವಸ್ಥೆ ಏನಿದೆ ಮತ್ತು ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ನೀತಿ ನಿಯಮಗಳು ಏನಿವೆ, ಅದರ ತದ್‌ವಿರುದ್ಧವಾಗಿ ಹೋಗುತ್ತದೆ. ಜಿ.ಓ ಮತ್ತು ಸುತ್ತೋಲೆ ಏನಿದೆ, ಅದನ್ನು ನಾವು ತಡೆಗಟ್ಟಬೇಕು ಮತ್ತೆ ಈಗ ಇದನ್ನು ಮುಂದುವರಿಸಬೇಕಾದರೆ ಸರ್ಕಾರ ಸ್ಪಷ್ಟವಾಗಿ ಅಧಿಕಾರಸ್ಥರನ್ನು ಏನು ನೇಮಕ ಮಾಡಿದ್ದಾರೆ, ಅವರಿಗೆ ಮತದಾನದ ಹಕ್ಕು ಇಲ್ಲವೆಂದು ಸ್ಪಷ್ಟಪಡಿಸುವುದಾದರೆ, ಆಗ ನಾವು ಸಧ್ಯಕ್ಕೆ ಮುಂದುವರಿಸಿಕೊಂಡು ಹೋಗುವುದಕ್ಕೆ ಆಗುತ್ತದೆ. ಇದರ ಬಗ್ಗೆ ಸುಧೀರ್ಘ ಚರ್ಚೆ ಮಾಡುವುದಕ್ಕೆ ಆಗುತ್ತದೆ, ಇಲ್ಲದಿದ್ದರೆ ಯಾವ ಒಂದು ಸೆಲ್ಫ್ ರೆಸ್ಪೆಕ್ಟ್ ಇರತಕ್ಕಂಥ ಎಂ.ಎಲ್.ಎ ಇದಕ್ಕೆ ಅಧ್ಯಕ್ಷರಾಗಿರುವುದಕ್ಕೆ ಸಾಧ್ಯವಾಗುವುದಿಲ್ಲ, ಏಕೆಂದರೆ ಸಭೆಗೆ ಹೋದಾಗ ಈ ಮೂರು ಜನ ನಾಮಿನೇಟೆಡ್ ಮೆಂಬರ್ಸ್, ಸ್ವಾಭಾವಿಕವಾಗಿ ಇವರನ್ನು ರಾಜಕೀಯವಾಗಿ ನಾಮಿನೇಟೆಡ್ ಮಾಡಿರುತ್ತಾರೆ, ಇಲ್ಲಿ ಅಧಿಕಾರಿಗಳು ಮತ್ತು ನಾಮಿನೇಟೆಡ್ ಮೆಂಬರ್ಸ್ ಏನು ಬೇಕಾದರೂ ತೀರ್ಮಾನ ಮಾಡಿಕೊಳ್ಳಬಹುದು, ಆದರೆ ಅಲ್ಲಿ ಎಂ.ಎಲ್.ಎ ನೊಡುತ್ತಾ ಕುಳಿತುಕೊಳ್ಳಬೇಕಾಗುತ್ತದೆ. ಇದಕ್ಕೆ ಆಡಳಿತ ಪಕ್ಷದ ಅಥವಾ ವಿರೋಧ ಪಕ್ಷದ ಶಾಸಕರೆ ಆಗಲಿ ರಬ್ಬರ್ ಸ್ಟ್ಯಾಂಪ್ ಅಥವಾ ನಾಮಕಾವಸ್ಥೆ ರೀತಿಯಲ್ಲಿ ಇರುವುದಕ್ಕೆ ಯಾರು ತಯಾರಿರುವುದಿಲ್ಲವೆಂದು ನನ್ನ ಭಾವನೆ. ನಾಮಿನೇಷನ್ ಪ್ರಿನ್ಸಿಪಲ್ಸ್‌ನ್ನು ನಾವು ಯಾವತ್ತು ಸಹ ವಿರೋಧ ಮಾಡುತ್ತಾ ಬಂದಿದ್ದೇವೆ. ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎಷ್ಟೋ ಸಲ ಈ ನಾಮಿನೇಟೆಡ್ ಕಲ್ಚರ್ ಹೋಗಬೇಕೆಂದು ಎಲ್ಲರ ಪರವಾಗಿ ಆ ಮಾತನ್ನು ಹೇಳಿದ್ದಾರೆ. ಆದರೂ ಕೂಡ ತಾಲ್ಲೂಕು ಸಮಿತಿಗಳಿಗೆ ನಾಮಿನೇಟೆಡ್ ಮಾಡಿದ್ದೀರಿ, ಇದಕ್ಕೆ ನಾವು ಟೀಕೆ ಮಾಡಿದ್ದರೂ ಸರ್ಕಾರ ಅದನ್ನು ಕಿವಿ

ಮೇಲೆ ಹಾಕಿಕೊಳ್ಳಲಿಲ್ಲ. ಆಗ ಅವರಿಗೆ ಮತದಾನ ಹಕ್ಕು ಇರಲಿಲ್ಲ, ಆದ್ದರಿಂದ ನಾವುಗಳೆಲ್ಲರೂ ಸಹಿಸಿಕೊಂಡಿದ್ದೆವು. ಇದೇ ರೀತಿ ನೀವು ನಾಮಿನೇಟೆಡ್ ಮಾಡಿದ್ದೀರಿ, ಅವರಿಗೆ ಮತದಾನದ ಹಕ್ಕು ಇಲ್ಲ ಎಂದು ಹೇಳುವುದಾದರೆ, ನಾವು ಮುಂದುವರಿಸಿಕೊಂಡು ಅದರ ಮೇಲೆ ಸುಧೀರ್ಘವಾಗಿ ಚರ್ಚೆಯಾಗಿ ಮತ್ತೆ ಬೇರೆ ವಿಷಯಗಳ ಬಗ್ಗೆ ಯಾವರೀತಿ ವ್ಯವಸ್ಥೆ ಮಾಡಬೇಕು ಅದರ ಮೇಲೆ ಬೇಕಾದರೆ ಚರ್ಚೆ ಮಾಡೋಣ. ಆದ್ದರಿಂದ ಸರ್ಕಾರ ಸ್ಪಷ್ಟವಾದ ನಿಲುವನ್ನು ಹೇಳಬೇಕು.

ಉಪಾಧ್ಯಕ್ಷರು: ಈಗ ಮಾನ್ಯ ವಸತಿ ಸಚಿವರು ಉತ್ತರವನ್ನು ಹೇಳುತ್ತಾರೆ. ಎಲ್ಲರೂ ಎದ್ದು ನಿಂತರೆ ಹೇಗೆ? ಮಾನ್ಯ ಫೋರ್ಪಡೆಯವರು, ಹಿರಿಯ ಸದಸ್ಯರು ಮತ್ತು ಹಿಂದೆ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. ಅವರು ತಮ್ಮ ಅನುಭವದ ಮೇಲೆ ಮಾತನಾಡಲಿ ಎಂದು ಅವಕಾಶ ಮಾಡಿಕೊಡಲಾಗಿತ್ತು, ಆದರೆ ಮಾನ್ಯ ಸಗೀರ್ ಅಹಮದ್‌ರವರೇ ತಾವು ಪದೇಪದೇ ಈ ರೀತಿ ಅಡಚಣೆ ಮಾಡಿದರೆ ಹೇಗೆ? ಎಲ್ಲರೂ ಚರ್ಚೆ ಮಾಡುವುದಾದರೆ ಉಳಿದವರು ಏನು ಮಾಡಬೇಕು? ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ಅಧಿಕಾರದ ವಿಕೇಂದ್ರೀಕರಣದಲ್ಲಿ ಸರ್ಕಾರ ಚಾಂಪಿಯನ್ ಎಂದು ಹೇಳುತ್ತೀರಿ?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸಗೀರ್ ಅಹಮದ್‌ರವರೆ, ಈ ಸಮಿತಿಯೇ ಆಗಬಾರದಾಗಿತ್ತು. ಬೇಕಾದರೆ ಮಾನ್ಯ ಹಿರಿಯ ಸದಸ್ಯರಾದ ಫೋರ್ಪಡೆಯವರನು ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ: ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಹಿರಿಯ ಸದಸ್ಯರು ಮತ್ತು ಮಾಜಿ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀಮಾನ್ ಫೋರ್ಪಡೆಯವರು ಹಲವಾರು ಸೂಚನೆಗಳನ್ನು ಕೊಟ್ಟಿದ್ದಾರೆ. ನಾಮಿನೇಷನ್ ಮಾಡಿದ್ದರ ಬಗ್ಗೆ ಮಾನ್ಯ ಸಿ.ಆರ್.ಸಗೀರ್ ಅಹಮದ್‌ರವರು ಹೇಳಿದರು. ನಮಗೆ ನಾಮಿನೇಷನ್ ಮಾಡಬೇಕೆನ್ನುವ ಉದ್ದೇಶ ಇಲ್ಲ. ಅಥವಾ ಆಶ್ರಯ ಕಮಿಟಿ ಮಾಡಬೇಕೆನ್ನುವ ಉದ್ದೇಶ ನಮಗೆ ಇರಲಿಲ್ಲ. ಅಧ್ಯಕ್ಷರನ್ನು ತಾವು ಮಾಡಬೇಕೆಂದು ಸಭೆ ನಿರ್ಣಯ ಮಾಡಿತ್ತು ನಾವು ಅಧ್ಯಕ್ಷರನ್ನು ಮಾಡಿದೆವು. ನಾನು ಕೆಲವು ಕಡೆ ಆದೇಶ ಕೊಟ್ಟು ಸದಸ್ಯರುಗಳಿಗೆ ಅವಮಾನ ಮಾಡಬೇಕೆಂದು ಇಲ್ಲ. ಕೆಲವು ಕಡೆ 8- 10 ಸಭೆಗಳನ್ನೇ ಕರೆದಿಲ್ಲ, ಕೆಲವು ಕಡೆ ಸಭೆಗಳನ್ನು ಕರೆಯುತ್ತಾ ಇಲ್ಲ. ಆಶ್ರಯ ಕಮಿಟಿ ಮಾಡಿ ಸದಸ್ಯರಿಗೆ ಸುತ್ತೋಲೆಯನ್ನು ಕಳುಹಿಸಿ ಆದೇಶ ಕೊಟ್ಟಿದೆ. ಆದರೆ ಕೆಲವು ಕಡೆ ಇವತ್ತಿನವರೆಗೂ ಸಭೆಯನ್ನು ಕರೆದಿಲ್ಲ. ಕೆಲವು ಕಡೆ ಸಭೆಯನ್ನು ಕರೆದಿದ್ದಾರೆ. ನಾನು ಹೇಳುವುದು, ಸಭೆಯನ್ನು ಕರೆದ ಕಡೆ ಇದು ಅಪ್ಲೈ ಆಗುವುದಿಲ್ಲ. ಕೆಲವು ಕಡೆ 10- 12 ಸಭೆಗಳನ್ನು ಕರೆದರೂ ಏನು ನಿರ್ಣಯ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಇದನ್ನು ಒಳ್ಳೆಯ

ಉದ್ದೇಶ ಇಟ್ಟುಕೊಂಡು ಮಾಡಿದ್ದುದು, ಇದಕ್ಕೆ ಬೇರೆ ಯಾವುದೇ ರೀತಿಯ ಉದ್ದೇಶ ಏನೂ ಇಲ್ಲ. ತಮ್ಮ ಮನಸ್ಸಿಗೆ ಏನಾದರೂ ನೋವು ಇದ್ದರೆ ಹೇಳಿ, ಸದಸ್ಯರ ವಿರುದ್ಧವಾಗಲಿ ಅಥವಾ ಸಭೆಯ ವಿರುದ್ಧವಾಗಲಿ ನಡೆದುಕೊಳ್ಳುವ ಉದ್ದೇಶ ನನಗೆ ಇಲ್ಲ. ನಾವು ಸರ್ಕಾರದಿಂದ ಸುತ್ತೋಲೆಯನ್ನು ತೆಗೆಯುತ್ತೇವೆ ನಾಮಿನೇಷನ್ ಮತ್ತು ಅಧ್ಯಕ್ಷರನ್ನು ಬೇಕಾದರೆ ತೆಗೆಯುವುದಕ್ಕೆ ತಯಾರಾಗಿದ್ದೇವೆ. ತಾತ್ಕಾಲಿಕವಾಗಿ ವಿಥ್‌ಡ್ರಾ ಮಾಡಿ ಕಾರ್ಯೋನ್ಮುಖರಾಗಿ ತಮ್ಮ ಅಭಿಪ್ರಾಯ ತೆಗೆದುಕೊಂಡು ಆಮೇಲೆ ಮಾಡಿಫಿಕೇಷನ್ ಮಾಡೋಣ.

ಉಪಾಧ್ಯಕ್ಷರು: ಇಲ್ಲಿಗೆ ಈ ಚರ್ಚೆ ಮುಕ್ತಾಯವಾಯಿತು. ಇನ್ನು ಮುಂದೆ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

2. ಪ್ರಶ್ನೋತ್ತರಗಳು:

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ: ಗುಲ್ಬರ್ಗ ಜಿಲ್ಲೆ ಚೆಕ್ ಡ್ಯಾಮಿನ ನಿರ್ಮಾಣ.

250 (1590)

ರೇವುನಾಯಕ (ಕಮಲಾಪುರ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಚೆಕ್‌ಡ್ಯಾಮ್ ಕಟ್ಟುವ ಸಲುವಾಗಿ ಪ್ಲಾನ್ ತಯಾರಾಗಿ ಕೆಲವು ಸ್ಥಳಗಳಲ್ಲಿ ಕೆಲಸ ಪ್ರಾರಂಭವಾಗಿದ್ದು ಈಗ ಕೆಲಸ ನಿಂತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಚೆಕ್‌ಡ್ಯಾಮ್ ಕಟ್ಟುವ ಕೆಲಸ ಯಾವಾಗ ಪ್ರಾರಂಭ ಮಾಡಲಾಗುವುದು.

ಇ) ನೀರಿನ ಸಮಸ್ಯೆಗೆ ಪರಿಹಾರವೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಅ) ಇಲ್ಲಾ.

ಆ) 1997-98ನೇ ಸಾಲಿನಲ್ಲಿ ಚೆಕ್ ಡ್ಯಾಂ ಕಾಮಗಾರಿಗಳನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಲಾಗಿದೆ. 1998-99ನೇ ಸಾಲಿಗಾಗಿ ಕ್ರಿಯಾ ಯೋಜನೆಗಳ ಅನುಮೋದನೆ ದೊರೆತು ಹಣ ಬಿಡುಗಡೆಯಾದ ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.